

# ಉದ್ದ ಮೂಗಿನ ಕೋತಿ

ಈ ಚಿತ್ರದಲ್ಲಿರುವ ಮಂಗನ ಮೂಗನ್ನೊಮ್ಮೆ ನೋಡಿ. ಪೂರ್ತಿ ಮುಖವನ್ನೇ ಮುಚ್ಚಿರುವ ಇದರ ಮೂಗಿನ ಉದ್ದ ಬರೋಬ್ಬರಿ ಹತ್ತು ಸೆಂಟಿಮೀಟರ್! ಪ್ರೊಬೆಸ್ಕಿಸ್ ಜಾತಿಯ ಮಂಗವಿದು. ಪ್ರೊಬೆಸ್ಕಿಸ್ ಎಂದರೆ ಆನೆಯ ಸೊಂಡಿಲು. ಹೀಗಾಗಿ ಇದನ್ನು ಆನೆಯ ಸೊಂಡಿಲಿನ ಕೋತಿಯೆಂದು ಕರೆಯುತ್ತಾರೆ.

ಉದ್ದ ಮೂಗಿನಿಂದ ಮಾತ್ರವಲ್ಲದೆ ಡೊಳ್ಳು ಹೊಟ್ಟೆಯಿಂದಲೂ ಇದು ಪ್ರಸಿದ್ಧಿ ಪಡೆದಿದೆ. ಇದು ಪಕ್ವ ಫಲಗಳನ್ನು ತಿಂದು ಜೀರ್ಣಿಸಲಾರದು. ಹಾಗಾಗಿ ಎಲೆ ಮತ್ತು ಬೀಜಗಳನ್ನು ಮಾತ್ರ ಸೇವಿಸುತ್ತದೆ. ಇಪ್ಪತ್ನಾಲ್ಕು ಕೆ.ಜಿಯ ಗಂಡು ಮಂಗ 72 ಸೆಂಟಿಮೀಟರ್ ಬೆಳೆದರೆ, ಹೆಣ್ಣು ಮಂಗಗಳು ಹನ್ನೆರಡು ಕೆ.ಜಿ ಭಾರ ಇದ್ದು, 60 ಸೆಂಟಿಮೀಟರ್ ಉದ್ದ ಬೆಳೆಯುತ್ತವೆ.

ಸಾಮಾನ್ಯವಾಗಿ ಇವು ಮರಗಳ ಮೇಲೆ ವಾಸಿಸುತ್ತವೆ. ಇದರ ಇನ್ನೊಂದು ವಿಶೇಷವೆಂದರೆ ನೀರಿನಲ್ಲೂ ಅಷ್ಟೇ ಸಲ್ಲಿಸಾಗಿ ಈಜಬಲ್ಲ ನಿಪುಣತೆ ಹೊಂದಿದೆ.

ಇವು ಬಾರ್ನಿಯೋ, ಪೀಟ್ ಸ್ವ್ಯಾಂಗ್ ಹಾಗೂ ರಿವರಿನ್ ಅರಣ್ಯದಲ್ಲಿ ಮಾತ್ರ ನೋಡಲು ಸಿಗುತ್ತವೆ. ಇವುಗಳ ಸಂತತಿ ಅವನತಿಯತ್ತ ಸಾಗಿದ್ದು ಕೇವಲ ಕೆಲವು ಸಾವಿರ ಕೋತಿಗಳು ಮಾತ್ರ ಅಸ್ತಿತ್ವದಲ್ಲಿದೆ. ಅವೂ ಕೂಡ ವಿನಾಶದಂಚಿನಲ್ಲಿರುವುದು ಪ್ರಾಣಿಪ್ರಿಯರಿಗೆ ಆತಂಕ ಉಂಟು ಮಾಡಿದೆ.

■ ಅಮೀರುದ್ದೀನ್ ಖಾಜಿ

